



# ಕಲಿಕೆ – ನಿಜವಾದ ಜೀವನ ಕಲೆ

ಜೀವನವೆಂಬುದು ನಿಂತ ನೀರಲ್ಲ. ಪ್ರತಿಕ್ಷಣವೂ ಹರಿಯುತ್ತಿರುವ ಪ್ರವಾಹ ಅದು. ನಾವೂ ಈ ಪ್ರವಾಹದಲ್ಲಿ ಈಜಾಡುತ್ತೇವೆ, ಮುಳುಗುತ್ತೇವೆ. ಕೆಲವೊಮ್ಮೆ ಕೊರಕಲಾದ ಬಂಡೆಗಳು, ಕೆಲವೊಮ್ಮೆ ಜಲಪ್ರಳಯದಂಥ ನೆರೆ, ಮತ್ತೊಮ್ಮೆ ಶಾಂತ-ಮಂದಗಾಮಿನಿ ನದಿ, ಇನ್ನೊಮ್ಮೆ ಧುಮ್ಮಿಕ್ಕುವ ರಭಸ. ಸುಖ-ದುಃಖ, ಸೋಲು-ಗೆಲುವು, ಹಿತ-ಅಹಿತ ಈ ಬಗೆಯ ಏರಿಳಿತಗಳು ಪ್ರವಾಹದ ಅಲೆಗಳಂತೆ, ಯಾವಾಗಲೂ ಇದ್ದೇ ಇವೆ. ಎಲ್ಲರೂ ಜೀವನ ಪ್ರವಾಹದಲ್ಲಿ ಈಜಾಡಲೇಬೇಕು. ಇಲ್ಲದಿದ್ದರೆ ಮುಳುಗಿಹೋಗುತ್ತೇವೆ. ಯಾರು ಚೆನ್ನಾಗಿ ಈಜಾಡುವವರು? ಯಾರಿಗೆ ಈಜು ಒಂದು ಶ್ರಮವಾಗಿರದೆ, ಆನಂದಕರವಾದ ಕ್ರೀಡೆಯಂತೆ ಅನ್ನಿಸುವುದೋ ಅವರು. ಹಲವರಿಗೆ ಈಜಾಡುವುದೇ ಬರುವುದಿಲ್ಲ, ಇನ್ನು ಕೆಲವರು ಅತ್ಯಂತ ಪರಿಶ್ರಮದಿಂದ, 'ಅಯ್ಯೋ, ಎಂತಹ ಕಷ್ಟ' ಎಂದು ಈಜಾಡುವವರು, ಕೆಲವರಿಗೆ ಮಿತಿ ಮೀರಿದ ಆಯಾಸ. ಬದುಕಿನಲ್ಲೂ ಅಷ್ಟೆ. ಜೀವನ ರಸವತ್ತಾಗಿರುವಂತೆ ಮಾಡುವುದೂ ಒಂದು ಕಲೆ. ಕೆಲವರು ಮಾತ್ರ ಈ ಕಲೆಯನ್ನು ಕರಗತ ಮಾಡಿಕೊಳ್ಳಬಲ್ಲರು. ಅನೇಕ ಬಗೆಯ ಅನುಭವಗಳ ಮೂಲಕ, ಸೋಲು-ಗೆಲುವುಗಳ ಮೂಲಕ ಹಾದುಹೋಗುವುದು ಎಲ್ಲರಿಗೂ ಅನಿವಾರ್ಯ. ಆದರೆ ಕೆಲವರು ಮಾತ್ರ ಬದುಕಿನ ಪಾಠಗಳನ್ನು ಚೆನ್ನಾಗಿ ಕರಗತ ಮಾಡಿಕೊಳ್ಳುವರು ಎಂಬುದು ಒಂದು ಆಶ್ಚರ್ಯಕರ ಸಂಗತಿಯಲ್ಲವೆ?

### 'ಬದುಕಿರುವವರೆಗೂ ಕಲಿಯುತ್ತೇನೆ'

ಹುಟ್ಟಿನಿಂದಲೇ ತಮ್ಮ ದೈವೀಸ್ವರೂಪದ ಅರಿವನ್ನು, ಅವತಾರ ಪುರುಷರು ಹೊಂದಿರುತ್ತಾರೆ ಎಂದು ಸ್ವಾಮಿ ಶಾರದಾನಂದರು 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಹೇಳುತ್ತಾರೆ. ಇದನ್ನು ಶ್ರೀರಾಮಕೃಷ್ಣರ ಜೀವನದಲ್ಲೂ ಕಾಣಬಹುದು. ಹೀಗಿದ್ದರೂ ಶ್ರೀರಾಮಕೃಷ್ಣರು ಒಂದು ಸಂದರ್ಭದಲ್ಲಿ, ''ಎಲ್ಲಿಯವರೆಗೆ ನಾನು ಬದುಕಿರುತ್ತೇನೋ, ಅಲ್ಲಿಯವರೆಗೂ ಕಲಿಯುತ್ತೇನೆ'' ಎಂದರು. ಇದರರ್ಥ, ಯಾವುದೋ ಒಂದು ವಿಷಯವನ್ನು ಕಲಿಯುತ್ತೇನೆ ಎಂದಾಗಲೀ, ಅದನ್ನು ಕಲಿತ ನಂತರ ಅದು ಮುಗಿಯಿತು ಎಂದಾಗಲೀ ಅರ್ಥವಲ್ಲ. ನಿರಂತರ ಕಲಿಯುವುದೇ ಒಂದು ಪ್ರಕ್ರಿಯೆ. ಇನ್ನೂ ಖಚಿತವಾಗಿ ಹೇಳುವುದಾದರೆ, ಕಲಿಕೆಗೆ ಕೊನೆಯಿಲ್ಲ. ವಿಸ್ತಾರ ಪ್ರಪಂಚದಲ್ಲಿ, ಅನಂತ ವಸ್ತುಗಳ ನಡುವೆ, ಅಸಂಖ್ಯಾತ ಕ್ರಿಯೆಗಳ ನಡುವೆ ಬದುಕುತ್ತಿರುವ ನಮಗೆ ಪ್ರತಿಯೊಂದು ಕ್ಷಣವೂ ಒಂದೊಂದು ಅನುಭವವೇ. ಈ ಹೊಸ ಹೊಸ ಅನುಭವಗಳು ಪ್ರತಿಬಾರಿಯೂ ನಮಗೆ ಒಂದೊಂದು ಅರಿವನ್ನು ತಂದುಕೊಡುತ್ತದೆ. ನಮಗೆ ಅರಿವಿಲ್ಲದೆಯೇ ನಾವು ಏನೇನನ್ನೋ ಕಲಿಯುತ್ತೇವೆ. ಅನೇಕರು ಇದನ್ನು ಗಮನಿಸುವುದಿಲ್ಲ. 'ನಾನೆಲ್ಲ ಕಲಿತದ್ದಾಗಿದೆ. ಇನ್ನೇನು ಕಲಿಯುವುದು?' ಎಂದು ಭಾವಿಸುವವರು, ತಮ್ಮ ಕಲಿಕೆಯನ್ನು ನಿರ್ಲಕ್ಷಿಸುತ್ತಾರೆ; ತಮ್ಮ ಕಲಿಕೆಗೆ ತಾವೇ ತಡೆಯಾಗುತ್ತಾರೆ. ಕೆಲವರು ಮಾತ್ರ ತಮ್ಮಲ್ಲಿ ನಡೆಯುತ್ತಿರುವ ಕಲಿಕೆಯ ಪ್ರಕ್ರಿಯೆಯನ್ನು ಗಮನಿಸುತ್ತಾರೆ. ಅವರಿಗೆ ಪ್ರತಿ ಕ್ಷಣದ ಕಲಿಕೆಯೂ ಒಂದು ಆನಂದದ ಅನುಭವ. ಹೊಸತನದ ವಿಸ್ಮಯ ಅದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಾವು ಶ್ರೀರಾಮಕೃಷ್ಣರ ಮಾತನ್ನು ಅರ್ಥಮಾಡಿಕೊಳ್ಳಬೇಕು.

### ಜೀವನ ಕಲೆ

ಬಾಲ್ಯದಿಂದಲೇ ನಮ್ಮ ಕಲಿಕೆ ಆರಂಭವಾಗುತ್ತದೆ. ಅಂದರೆ ಶಾಲೆಯಿಂದಲೆ? ಅದಕ್ಕೂ ಮುನ್ನ, ಮನೆಯಲ್ಲೇ ನಾವು ಮಾತನ್ನು ಕಲಿಯುವುದಿಲ್ಲವೆ? ಅದಕ್ಕೂ ಮುನ್ನ ಹೊರಳಲು, ತೆವಳಲು, ಕುಳಿತುಕೊಳ್ಳಲು, ನಡೆಯಲು ಕಲಿಯುವುದಿಲ್ಲವೆ? ಕಣ್ಣು ಬಿಟ್ಟು ನೋಡುವ ಕ್ಷಣದಿಂದಲೇ ಜಗತ್ತಿನಲ್ಲಿ ನಾನಾ ವಸ್ತುಗಳನ್ನು ಕಾಣುತ್ತೇವೆ, ಕಂಡದ್ದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ-ಕಲಿಕೆ ನಡೆದೇ ನಡೆಯುತ್ತದೆ. ಪ್ರಜ್ಞಾಪೂರ್ವಕ ಎಂದರೇನು? ಸರಿಯಾಗಿ ಪ್ರಜ್ಞೆ ಮೂಡುವುದೇ ನಮಗೆ ಐದು-ಆರು ವರ್ಷಗಳಾದ ನಂತರ ಎನ್ನುತ್ತೇವೆ. ಅದಕ್ಕೂ ಮೊದಲೇ ನಾವು ಕಲಿಯುವುದಿಲ್ಲವೆ? ಇನ್ನು ಶಾಲೆಗೆ ಹೋಗಿ ವಿದ್ಯಾಭ್ಯಾಸ ಆರಂಭವಾದ ನಂತರವೂ ನಮ್ಮ ಪ್ರಜ್ಞೆ ಸರಿಯಾಗಿ ಬೆಳೆದಿರುವುದೆ? ನಮ್ಮ ಪ್ರಜ್ಞೆ ಪೂರ್ಣವಾಗಿ ಪ್ರಕಾಶಗೊಳ್ಳುವುದು ಪ್ರೌಢಾವಸ್ಥೆಯಲ್ಲಿ;

ತಾರುಣ್ಯ ದಾಟಿದ ನಂತರವೇ ಎನ್ನುತ್ತಾರೆ. ಅಂದರೆ, ಪ್ರಜ್ಞೆಯಲ್ಲೂ ವಿಕಾಸದ ಹಂತಗಳಿವೆ; ಅದು ಬೆಳೆಯುತ್ತಾ ಹೋಗುತ್ತದೆ ಎಂದಾಯಿತು. ಕಲಿಕೆಯೊಂದಿಗೆ ನಮ್ಮ ಪ್ರಜ್ಞೆಯೂ ವಿಕಸನ ಹೊಂದುತ್ತದೆ. ಆದರೆ ಪ್ರಜ್ಞಾಪೂರ್ವಕವಾಗಿ ನಾವು ಕಲಿತದ್ದು ಹೆಚ್ಚು ದೃಢವಾಗಿರುತ್ತದೆ ಎನ್ನುವುದು ಸರ್ವವಿದಿತವಾದ ಸಂಗತಿ.

ಎಲ್ಲ ಕಲಿಕೆಯ ಪ್ರಕ್ರಿಯೆಯೂ ಸುಖಕರವಾಗಿರಬೇಕೆಂದಿಲ್ಲ. ಎಷ್ಟೋ ಬಾರಿ ನಮಗೆ ಇಷ್ಟವಿಲ್ಲದ ವಿಷಯಗಳನ್ನು ಕೂಡ ಕಲಿಯಲೇಬೇಕಾಗುತ್ತದೆ. ವಿದ್ಯಾರ್ಥಿಯೊಬ್ಬ ಕಷ್ಟಪಡುತ್ತ, ಪಠ್ಯ ಪುಸ್ತಕ ಕೈಯಲ್ಲಿ ಹಿಡಿದುಕೊಂಡು, ''ಅಯ್ಯೋ ಈ ಪಾಠ ಎಂಬುದು ಯಾಕಾದರೂ ಇದೆಯೋ! ಪರೀಕ್ಷೆ ಎನ್ನುವುದು ಯಾಕಾದರೂ ಇರಬೇಕೋ!'' ಎಂದು ಗೊಣಗಾಡುವುದನ್ನು ಯಾರು ತಾನೇ ಕಂಡಿಲ್ಲ? ಕಾಣುವುದೇನು, ಎಲ್ಲರ ಅನುಭವವೂ ಅದೇ ಅಲ್ಲವೆ?

ಆದರೆ ಇನ್ನು ಕೆಲವು ವಿಷಯಗಳಿವೆ. ನಮ್ಮ ಹೃದಯಕ್ಕೆ ಹತ್ತಿರವಾದ, ನಮಗೆ ಪ್ರಿಯವಾದ ವಿಷಯಗಳು. ಅವುಗಳನ್ನು ಕಲಿಯುವಾಗ ನಮಗೆ ಶ್ರಮ ಅನ್ನಿಸುವುದೇ ಇಲ್ಲ. ಎಷ್ಟು ಹೊತ್ತಾದರೂ ಪಠ್ಯಪುಸ್ತಕ ಹಿಡಿದುಕೊಂಡು ಓದುತ್ತೇವೆ. ಒಬ್ಬನಿಗೆ ಭೂಗೋಳ, ಇನ್ನೊಬ್ಬನಿಗೆ ರಸಾಯನ ಶಾಸ್ತ್ರ, ಮತ್ತೆ ಕೆಲವರಿಗೆ–ಬಹಳಷ್ಟು ಮಂದಿಗೆ ಅಪ್ರಿಯವಾಗಿರುವ –ಗಣಿತ! ಎಷ್ಟರ ಮಟ್ಟಿಗೆ ಓದು ಅವರನ್ನು ಆವರಿಸಿಬಿಡುತ್ತದೆ ಎಂದರೆ, ಅವರಿಗೆ ತಾನು ಕಲಿಯುತ್ತಿದ್ದೇನೆ ಅನ್ನಿಸುವುದೇ ಇಲ್ಲ. ಅವರಿಗೆ ಅರಿವಿಲ್ಲದಂತೆ, ಅಗತ್ಯವಿದ್ದುದಕ್ಕಿಂತಲೂ ಎಷ್ಟೋ ಹೆಚ್ಚಿನ ಸಂಗತಿಗಳನ್ನು ಅವರು ಅರಿತುಕೊಂಡುಬಿಡುತ್ತಾರೆ. ನಿಜವಾದ ಕಲಿಕೆ ಎಂದರೆ ಇದೇ. ಅರಿಯುವುದರಲ್ಲಿ ಇರುವ ಆನಂದ ನಮ್ಮನ್ನು ಸೆಳೆದುಕೊಂಡುಬಿಡಬೇಕು. ಕಲಿಕೆ ಎಂಬುದು ಕಲಿಕೆ ಅನ್ನಿಸಬಾರದು. ಓದು ಎಂಬುದು ಓದು ಅನ್ನಿಸಬಾರದು. ನಾವು ವಿಷಯದಲ್ಲಿ ಮುಳುಗಿ ಹೋಗಬೇಕು; ಕರಗಿಹೋಗಬೇಕು. ಏಕಾಗ್ರತೆ ಎಂಬುದು ಪ್ರಯತ್ನದಿಂದಲ್ಲ, ತಾನಾಗಿಯೇ ನಡೆಯಬೇಕು.

## ನಿಜವಾದ ಸಮಸ್ಯೆ

ಸಮಸ್ಯೆಯಿರುವುದು ಇಲ್ಲಲ್ಲ. ನಮಗೆ ಇಷ್ಟವಾದ ವಿಷಯಗಳಿರುವಂತೆಯೇ, ನಮಗೆ ಆಸಕ್ತಿಯಿರದ ವಿಷಯಗಳೂ ಇವೆಯಲ್ಲ! ಭೂಗೋಳವೇ ಪ್ರಾಣವಾಗಿರುವವನು ಗಣಿತ, ವಿಜ್ಞಾನ, ವ್ಯಾಕರಣ–ಇವನ್ನೂ ಓದಬೇಕಲ್ಲ! ಆ ಪುಸ್ತಕಗಳನ್ನು ಹಿಡಿದರೆ ಸಾಕು, ನಿದ್ದೆ ಬರುತ್ತದೆ, ತಲೆಗೆ ಹತ್ತುವುದಿಲ್ಲ; ಪರೀಕ್ಷೆ ಹತ್ತಿರವಾಯಿತೆಂದರೆ ಕೈಕಾಲು ನಡುಗುವುದು. ಇದಕ್ಕೇನು ಪರಿಹಾರ? 'ಕಲಿಕೆಯೆಂಬುದು ರಸವತ್ತಾದ ಅನುಭವ' ಎಂಬ ಮಾತನ್ನು ಇಲ್ಲಿ ಹೇಳುವುದೆಂತು? ಎಲ್ಲರೂ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಗದೆ ಒದ್ದಾಡುತ್ತಾರೆ. ಅಧ್ಯಾಪಕರೇನೋ, 'ಆಸಕ್ತಿಯಿಂದ ಓದಿದರೆ ಎಲ್ಲವೂ ಸುಲಭ' ಎಂದು ತತ್ತ್ವ ಹೇಳುತ್ತಾರೆ. ಆದರೆ ಅದನ್ನು ಕಾರ್ಯಗತಗೊಳಿಸುವುದು ಹೇಗೆ? ವರ್ಷಾನುಗಟ್ಟಲೆ ಇಷ್ಟವಿಲ್ಲದ ಪಠ್ಯಪುಸ್ತಕ ಓದಿ ತಲೆಕೆಡಿಸಿಕೊಳ್ಳುವುದೇ ಆಯಿತು; ಏನೂ ಅರ್ಥವಾಗುತ್ತಿಲ್ಲ – ಅದರಲ್ಲಿ ಆಸಕ್ತಿ ಹೇಗೆ ಬರಬೇಕು?

## ಮನಸ್ಸಿನ ವಿಚಿತ್ರ ಸ್ವಭಾವ

ಇಲ್ಲೇ ನಮಗೆ ನಮ್ಮ ಮನಸ್ಸನ್ನು ಅರಿತುಕೊಳ್ಳುವುದರ ಮಹತ್ವವಿರುವುದು. ನಮ್ಮ ಮನಸ್ಸು ಒಂದು ವಿಷಯದತ್ತ ಸೆಳೆಯಲ್ಪಟ್ಟಿದೆ. ಅದರಲ್ಲೇ ಆಸಕ್ತಿಹೊಂದಿದೆ. ಅದರಲ್ಲಿ ಎಷ್ಟರ ಮಟ್ಟಿಗೆ ಮಗ್ನವಾಗಿದೆ ಎಂದರೆ, ಉಳಿದ ವಿಷಯಗಳನ್ನೆಲ್ಲ ದೂರ ಮಾಡುತ್ತದೆ. ಇದೊಂದು ವಿಚಿತ್ರವಾದ ಮನಸ್ಸಿನ ಸ್ವಭಾವ. ಅದು ಒಂದು ವಿಷಯ, ವಸ್ತು , ವ್ಯಕ್ತಿಯತ್ತ ಆಸಕ್ತವಾಗಿರುವುದು ಸಹಜ. ಆದರೆ ಅದೇ ಕಾರಣಕ್ಕಾಗಿ ಉಳಿದ ವಸ್ತು–ವಿಷಯ ಇತ್ಯಾದಿಗಳನ್ನು ತಿರಸ್ಕರಿಸುವುದು ಹಾನಿಕರ. ಮನಸ್ಸಿನ ಈ ಸ್ವಭಾವವನ್ನು ಅರಿತುಕೊಂಡು ಅದಕ್ಕೆ ಸರಿಯಾದ ತರಬೇತಿಯನ್ನು ನಾವೇ ಕೊಡಬೇಕು. ''ನೋಡು, ನನ್ನ ಮನಸ್ಸೇ! ನಿನಗೆ ಭೂಗೋಳ ಪ್ರಿಯವೇನೋ ನಿಜ. ಎಷ್ಟು ಹೊತ್ತಾದೂ ಓದಿಕೊ. ಆದರೆ, ಎಚ್ಚರದಿಂದಿರು. ಈ ಕಾರಣಕ್ಕೆ ಗಣಿತವನ್ನು ಬಿಡಬೇಡ. ವಿಜ್ಞಾನವನ್ನು ನಿರ್ಲಕ್ಷಿಸಬೇಡ. ಅವುಗಳನ್ನೂ ಓದುವುದು ಅಗತ್ಯ . ಅದಕ್ಕಾಗಿ ಮೀಸಲಿಟ್ಟಿರುವ ಸಮಯವನ್ನು ಅದಕ್ಕಾಗಿಯೇ ಉಪಯೋಗಿಸಿಕೋ'' ಎಂದು ನಮಗೆ ನಾವೇ ಬುದ್ಧಿ ಹೇಳಿಕೊಳ್ಳಬೇಕು. ಇದು ಮನಸ್ಸಿನ ತರಬೇತಿ. ಆದರೆ ಇಷ್ಟೇ ಅಲ್ಲ. ನಮಗೆ ಭೂಗೋಳ ಎಷ್ಟು ಇಷ್ಟವೋ, ನನ್ನ ಸ್ನೇಹಿತನಿಗೆ ಗಣಿತ ಅಷ್ಟೇ ಇಷ್ಟವಾಗಿದೆಯಲ್ಲ! ಇದು ಹೇಗೆ?–ಇನ್ನೊಬ್ಬ ಸ್ನೇಹಿತ ಜೀವಶಾಸ್ತ್ರದಲ್ಲಿ ಅಷ್ಟೊಂದು ಮುಳುಗಿ ಹೋಗಿದ್ದಾನಲ್ಲ, ಅದು ಹೇಗೆ? — ಅಂದರೆ, ಎಲ್ಲ ವಿಷಯಗಳೂ ನಿಜವಾಗಿ ಅದ್ಭುತವಾಗಿರುತ್ತವೆ. ನಮ್ಮ ಮನಸ್ಸು ಯಾವುದರ ಕಡೆಗೆ ಹೆಚ್ಚು ಒಲವನ್ನು ಹೊಂದಿದೆಯೋ ಅದು ನಮಗೆ ಪ್ರಿಯವಾಗಿರುತ್ತದೆ; ನಮಗೆ ಅದು ಪಂಚಪ್ರಾಣವಾಗಿರುತ್ತದೆ.

## ಅಸಾಧ್ಯವೂ ಸಾಧ್ಯವೆ?

ಅಂದರೆ, ನಮಗೆ ಇಷ್ಟವಿಲ್ಲದ ಗಣಿತವನ್ನೋ ಬಯಾಲಜಿಯನ್ನೋ ನಾವು ಪ್ರಯತ್ನಪಟ್ಟರೆ ನಮಗೆ ಇಷ್ಟವಾದುದನ್ನಾಗಿ ಮಾಡಿಕೊಳ್ಳಬಹುದೆ? ನೂರಕ್ಕೆ ಹತ್ತೇ ಅಂಕ ಗಳಿಸಿರುವ ಗಣಿತದಲ್ಲಿ ನಾನು ತೊಂಬತ್ತೈದು ಅಂಕ ಗಳಿಸಬಹುದೆ?

**ಖಂಡಿತ ಗಳಿಸಬಹುದು. ಅದನ್ನೂ ನಮಗೆ ಪ್ರಿಯವಾದ ವಿಷಯವನ್ನಾಗಿ ಪರಿವರ್ತಿಸಬಹುದು.** ಆದರೆ ಹೇಗೆ? ಇದರ ರಹಸ್ಯ ಇಲ್ಲಿದೆ: ಮನಸ್ಸಿಗೆ ಇದೇ ವಿಷಯ ಅಥವಾ ವಸ್ತು ಇಷ್ಟವಾಗಿರುವುದು – ನಮ್ಮ ಮನಸ್ಸು ಅದರಲ್ಲೇ ಬಹಳ ಹೊತ್ತು ನೆಲೆಸಿದ್ದರಿಂದ, ಅದನ್ನೇ ಚಿಂತಿಸಿದ್ದರಿಂದ, ಮತ್ತೆ ಮತ್ತೆ ಅದೇ ಆಲೋಚನೆ ಮಾಡಿದ್ದರಿಂದ. ಈಗ ಗಣಿತ ಇಷ್ಟವಾಗಬೇಕೆ? –

ಅದರಲ್ಲೇ ಅನೇಕ ಬಾರಿ ಮನಸ್ಸನ್ನು ಇಡು. ಮೊದಮೊದಲು ಅದು ಹಿತಕರವಾಗುವುದಿಲ್ಲ. (ಕಾರಣ – ನನಗೆ ಪ್ರಿಯವಾದ ಭೂಗೋಳ, ಅಥವಾ ಇನ್ನಾವುದೇ ವಿಷಯ ನನ್ನನ್ನು ತಡೆಯುತ್ತದೆ.) ಆದರೆ ಬಲವಂತವಾಗಿ ಹಲವು ಬಾರಿ ಪ್ರಯತ್ನಿಸು. ಯಾವುದೋ ಒಂದು ಕ್ಷಣದಲ್ಲಿ ಗಣಿತದ ಒಂದು ಅಂಶ ರುಚಿಸುತ್ತದೆ. ಇದು 'ಮೊದಲ ರುಚಿ'. ಅದನ್ನೇ ಹಿಡಿದುಕೋ. ಮತ್ತೆ ಮತ್ತೆ ರುಚಿ ನೋಡು. ಯಾರೂ ನಿನ್ನನ್ನು ತಡೆಯುವುದಿಲ್ಲ. ಕ್ರಮೇಣ ಈ ರುಚಿ ಗಣಿತವನ್ನೆಲ್ಲ ವ್ಯಾಪಿಸತೊಡಗುತ್ತದೆ. ನಿನ್ನನ್ನು ಬಲವಾಗಿ ಹಿಡಿದುಕೊಳ್ಳುತ್ತದೆ. ನಿನಗೆ ಪ್ರಿಯವಾದ ಭೋಗೋಳವನ್ನೂ ಮರೆಯುವಂತೆ ಮಾಡುತ್ತದೆ. (ಆದರೆ ಹಾಗಾಗದಿರಲಿ. ಭೂಗೋಳ ಓದುವ ವೇಳೆಯಲ್ಲಿ ಅದೇ ನಿನಗೆ ಪರಮಪ್ರಿಯವಾಗಿರಲಿ. ಅದೇ ರೀತಿ, ಉಳಿದ ವಿಷಯಗಳಲ್ಲೂ ಕೂಡ).

### ಮನಸ್ಸಿನ ತರಬೇತಿ

ನಿಜವಾಗಿ ಮನಸ್ಸಿಗೆ ಯಾವುದೇ ಒಂದು ವಿಷಯದಲ್ಲಿ ಆಸಕ್ತಿಯೆಂಬುದು ಇರುವುದಿಲ್ಲ; ಅದು ನಮ್ಮ ಅಭ್ಯಾಸದಿಂದ ಮೂಡಿಬಂದ ಆಸಕ್ತಿಯಷ್ಟೇ ಎಂಬ ವಿಷಯ ನಮಗೆ ಅರ್ಥವಾದರೆ, ನಮ್ಮ ಮನಸ್ಸನ್ನು ನಾವು ಯಾವುದೇ ವಿಷಯದ ಕಡೆಗಾದರೂ ಹರಿಸಬಹುದು. ಇದಕ್ಕೆ ನಾವು ಹಲವು ಬಾರಿ ಪ್ರಯತ್ನಿಸಬೇಕು; ಅನೇಕ ಸಲ ಅಭ್ಯಾಸ ಮಾಡಬೇಕು; ನಿರಂತರ ಶ್ರಮಪಡುವುದನ್ನು ರೂಢಿಸಿಕೊಳ್ಳಬೇಕು. ಇದನ್ನು ಮಾಡಲು ಸಾಧ್ಯವಾದರೆ, ನಾವು ನಮ್ಮ ಮನಸ್ಸನ್ನೇ ಗೆದ್ದಂತೆ.

ಶ್ರೀರಾಮಕೃಷ್ಣರು ಮನಸ್ಸಿನ ಸ್ವಭಾವಕ್ಕೆ ಒಂದು ಹೋಲಿಕೆಯನ್ನು ಕೊಡುತ್ತಾರೆ: ಅದು ಶುಭ್ರವಾದ ಬಿಳಿಯ ಬಟ್ಟೆಯಂತೆ. ಹತ್ತಾರು ಬಗೆಯ ಬಕೆಟ್‌ಗಳಲ್ಲಿ ನಾನಾ ಬಣ್ಣದ ನೀರುಗಳನ್ನು ತುಂಬಿಸಿ ಇಡಲಾಗಿದೆ ಎಂದಿಟ್ಟುಕೊಳ್ಳೋಣ. ಈಗ ನಾವು ಬಟ್ಟೆಯನ್ನು ಕೆಂಪು ನೀರಿನ ಬಕೆಟ್‌ನಲ್ಲಿ ಅದ್ದಿದರೆ ಬಟ್ಟೆ ಕೆಂಪು ಬಣ್ಣವನ್ನು ಪಡೆಯುತ್ತದೆ. ಅದೇ ರೀತಿ ನೀಲಿ ಬಕೆಟ್ಟಿನಲ್ಲಿ ಅದ್ದಿದರೆ ನೀಲಿಯಾಗುತ್ತದೆ. ಅಂತೆಯೇ ಹಳದಿ, ಹಸಿರು ಇತ್ಯಾದಿ. ನಮ್ಮ ಮನಸ್ಸೂ ಇದೇ ರೀತಿ. ಅದಕ್ಕೆ ನಿಜವಾಗಿ ಯಾವ ಬಣ್ಣವೂ ಇಲ್ಲ; ಆಂದರೆ ಯಾವುದರ ಮೇಲೂ ವಿಶೇಷ ಪ್ರೀತಿ, ಆಸಕ್ತಿ ಎಂಬುದಿಲ್ಲ. ಯಾವ ವಿಷಯ, ವಸ್ತು ಇತ್ಯಾದಿಗಳಲ್ಲಿ ಅದನ್ನು ಇಡುತ್ತೇವೋ (ಬಟ್ಟೆಯನ್ನು ಅದ್ದುವಂತೆ) ಅದಕ್ಕೆ ಆ ವಿಷಯದ, ವಸ್ತುವಿನ ಅರಿವು ಉಂಟಾಗುತ್ತದೆ (ಬಣ್ಣ ಬಟ್ಟೆಯನ್ನು ವ್ಯಾಪಿಸುವಂತೆ). ನಾವು ಇದನ್ನೇ 'ನನಗೆ ಇದರಲ್ಲಿ ಆಸಕ್ತಿ' 'ಇದು ನನಗೆ ಇಷ್ಟ' ಎನ್ನುತ್ತೇವೆ.

ತರಬೇತಿ ಹೊಂದಿದ ಮನಸ್ಸು, ಯಾವ ವಿಷಯವನ್ನಾದರೂ ತನಗೆ ಪ್ರಿಯವಾಗಿಸಿಕೊಳ್ಳುವುದು, ಅದರಲ್ಲೇ ಮನಸ್ಸು ನೆಲೆಸುವಂತಾಗುವುದು. ಕೊನೆಗೆ ಆ ವಿಷಯವನ್ನೇ ತನ್ನ ಸರ್ವಸ್ವವನ್ನಾಗಿ ಮಾಡಿಕೊಳ್ಳುವುದು. ಇದೇ ಕಲಿಕೆಯ ರಹಸ್ಯ. 'ಬದುಕಿರುವ ತನಕವೂ ಕಲಿಯುತ್ತೇನೆ' ಎಂಬ ಮಾತಿನ ಆಳವಾದ ಅರ್ಥ ಇದೇ. ಇಲ್ಲಿ ಕಲಿಕೆ ಎಲ್ಲವೂ ರಸಮಯ, ಆನಂದಮಯ.

### ಬದುಕಿನ ವಿಭಿನ್ನ ಸ್ತರಗಳಲ್ಲಿ

ವಿದ್ಯಾರ್ಥಿಗಳು, ಯಾವುದೇ ಉನ್ನತ ವ್ಯಾಸಂಗ ಮಾಡುವವರು, ಸಂಶೋಧಕರು ಈ ರಹಸ್ಯವನ್ನು ಅರಿತಿದ್ದರೆ ಅವರ ಕಲಿಕೆ ಇನ್ನು ಮುಂದೆ ಕಷ್ಟದಾಯಕವಾಗಿರುವುದಿಲ್ಲ. ಕೇವಲ ವಿದ್ಯಾಭ್ಯಾಸ ಮಾಡುವವರಷ್ಟೇ ಅಲ್ಲ; ಬದುಕಿನ ಎಲ್ಲ ಸ್ತರಗಳಲ್ಲೂ ಇದನ್ನು ಅರಿತು ಜೀವನವನ್ನು ಒಂದು ರಸವತ್ತಾದ ಕಲೆಯನ್ನಾಗಿ ಮಾರ್ಪಡಿಸಲು ಸಾಧ್ಯವಿದೆ. ಆಧ್ಯಾತ್ಮಿಕ ಸಾಧಕರು ವಿಶೇಷವಾಗಿ ತಮ್ಮ ಮನಸ್ಸನ್ನು ತರಬೇತಿಗೊಳಿಸಿ ಸಾಧನೆ ಮಾಡುವುದು ಅತ್ಯಂತ ಮುಖ್ಯವಾದ ಕಾರ್ಯವಾಗಿರುವುದರಿಂದ, ಅವರಿಗೆ ಈ ಬಗೆಯ ಅಭ್ಯಾಸ ಅತ್ಯಂತ ಫಲದಾಯಕವಾಗಿದೆ. ಆದ್ದರಿಂದಲೇ ಗೀತೆಯಲ್ಲೂ, ಪಾತಂಜಲ ಯೋಗಸೂತ್ರಗಳಲ್ಲೂ **ಅಭ್ಯಾಸ ಮತ್ತು ವೈರಾಗ್ಯ** ಇವುಗಳು ಸಾಧನೆಗೆ ಅತ್ಯಂತ ಪ್ರಧಾನವಾದ ಸಂಗತಿಗಳು ಎನ್ನಲಾಗಿದೆ.

ನಮ್ಮ ಮನಸ್ಸು ಹೇಗೆ ಕೆಲಸ ಮಾಡುತ್ತದೆ, ಅದನ್ನು ಯಾವ ರೀತಿ ಪಳಗಿಸಿ ಜೀವನದಲ್ಲಿ ಬಳಸಿಕೊಳ್ಳಬೇಕು ಎಂಬುದನ್ನು ನಾವು ಅರಿತುಕೊಳ್ಳುತ್ತಿದ್ದಂತೆ ಒಂದು ಅಂಶ ಸ್ಪಷ್ಟವಾಗುತ್ತದೆ: ಮನಸ್ಸು ಒಂದು ಅದ್ಭುತವಾದ ಉಪಕರಣ. ವೇದಾಂತ ಹೇಳುವಂತೆ, ನಾವೇ ಮನಸ್ಸು, ನಾವೇ ದೇಹ, ನಾವೇ ಬುದ್ಧಿ ಎಂದು ಅವುಗಳೊಂದಿಗೆ ನಮ್ಮನ್ನು ಗುರುತಿಸಿಕೊಳ್ಳುವುದು ಅಜ್ಞಾನ. ನಾವು ಅವುಗಳ ಸಹಾಯದಿಂದ ಅರಿತುಕೊಳ್ಳುತ್ತೇವೆ. ಅವೆಲ್ಲ ಬರಿಯ ಸಲಕರಣೆಗಳು – ಮಾನವನಿಗೆ ಲಭ್ಯವಾಗಿರುವ ಶ್ರೇಷ್ಠ ಉಪಕರಣಗಳು. ಈ ರೀತಿ ನಾವು ಭಾವಿಸಿಕೊಂಡಾಗಲೇ ನಮಗೆ ಅವುಗಳನ್ನು ಸರಿಯಾಗಿ ಪಳಗಿಸಲು, ಉಪಕರಣಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗುವುದು. ನಾವು ಅನಗತ್ಯ ಗೊಂದಲ, ಕಳವಳ, ಉದ್ವೇಗ, ರಾಗದ್ವೇಷ, ಮೇಲರಿಮೆ–ಕೀಳರಿಮೆ — ಇಂತಹ ಗೊಂದಲಗಳಿಂದ ದೂರವಾಗಿ, ಮನಸ್ಸೆಂಬ ಶ್ರೇಷ್ಠ ಉಪಕರಣವನ್ನು ನಮ್ಮ ಉನ್ನತಿಗಾಗಿ ಬಳಸಿಕೊಳ್ಳುವುದು ಒಂದು ಕಲೆ; ಜೀವನದಲ್ಲಿ ಅತ್ಯಗತ್ಯವಾದ ಕಲಿಕೆಯ ಕಲೆ. ✽

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೨ | ಭಾನುವಾರ | ಶ್ರೀದುರ್ಗಾ ಪೂಜೆ (ಮಹಾಸಪ್ತಮಿ) |
| ೩ | ಸೋಮವಾರ | ಶ್ರೀದುರ್ಗಾ ಪೂಜೆ (ಮಹಾಷ್ಟಮಿ) |
| ೪ | ಮಂಗಳವಾರ | ಶ್ರೀದುರ್ಗಾ ಪೂಜೆ (ಮಹಾನವಮಿ) |
| ೫ | ಬುಧವಾರ | ವಿಜಯದಶಮಿ |
| | | ಶ್ರೀಮಧ್ವ ಜಯಂತಿ |
| ೬ | ಗುರುವಾರ | ಏಕಾದಶಿ |
| ೨೧ | ಶುಕ್ರವಾರ | ಏಕಾದಶಿ |
| ೨೪ | ಸೋಮವಾರ | ಶ್ರೀ ಕಾಳೀ ಪೂಜೆ |